**ಓ.ಎಸ್. ನಂ. 8/2018** **ಪಿ.ಡಬ್ಲ್ಯೂ- 1**

<u>ಸಾಕ್ಷಿಯನ್ನು ದಿನಾಂಕ **13.4.2023** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ</u>

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 6.8.2014 ರ ಕರಾರುಪತ್ರವನ್ನು ನಿಪಿ1 ಎಂದು, ಪ್ರತಿವಾದಿಗಳ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ1 ಎ ಮತ್ತು ನಿಪಿ1 ಬಿ ಎಂದು ಗುರುತಿಸಲಾಯಿತು. ಸಾಕ್ಷಿಗಳಾದ ಸೋಮಶೇಖರ ರವರ ಸಹಿಯನ್ನು ನೋಡಿದರೆ ಗುರುತಿಸಬಲ್ಲೆ, ಅವರ ಸಹಿಯನ್ನು ನಿಪಿ1 ಸಿ ಎಂದು ಗುರುತಿಸಲಾಯಿತು.

ದಾವಾಸ್ವತ್ತಿನ ನಾಲ್ಕು ಪಹಣಿಗಳನ್ನು ನಿಪಿ2 ರಿಂದ ನಿಪಿ5 ಎಂದು, ತಿಳುವಳಿಕೆ ನೋಟಿಸನ್ನು ನಿಪಿ6 ಎಂದು, ಎರಡು ಅಂಚೆ ರಶೀದಿಗಳನ್ನು ನಿಪಿ7 ಮತ್ತು ನಿಪಿ8 ಎಂದು, ತಿರಸ್ಕರಿಸಿದ ಅಂಚೆ ಲಕೋಟೆಯನ್ನು ನಿಪಿ9 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.